ಬುಡಕಟ್ಟುಗಳ ಅಧ್ಯಯನಗಳ ಜೊತೆಗೆ ಸಾಹಿತ್ಯದ ಅಧ್ಯಯನವನ್ನು ಮಾಡಿರುವುದರಿಂದ ಇವೆಲ್ಲವೂ ಒಟ್ಟಾಗಿ ಹದವಾಗಿ ಬೆರೆತಿವೆ. ಉತ್ತಮ ಪುರುಷ ನಿರೂಪಣೆ ಲೇಖಕರು ತನ್ನನ್ನು ತಾನೇ ನಾಟ್ಯೀಕರಿಸಿಕೊಳ್ಳುವ ಒಂದು ವಿಧಾನವಾಗಿದೆ. ಜಯದೇವ ಅವರು ಮಸಣಮ್ಮ, ಚಿಕ್ಕಣ್ಣ, ಸಾರಿಮಾದಮ್ಮ, ಕುನ್ನೇಗೌಡ, ಕಾರನ ಕೇತೇಗೌಡ ಅವರಲ್ಲಿ ಬೆರೆತು ಒಂದಾಗಿ ತಮ್ಮನ್ನೂ ಹಾಸ್ಯ ಮಾಡಿಕೊಳ್ಳುತ್ತಾ, ಅವರನ್ನೂ ಒಮ್ಮೊಮ್ಮೆ ಹಾಸ್ಯ ಮಾಡುತ್ತಾ ತಾವು ಕಂಡ, ಕೇಳಿದ, ಊಹಿಸಿದ ತಿಳಿವಳಿಕೆಗೆ ಸಿಕ್ಕಿದ ಸಂಗತಿಗಳನ್ನು ಹೇಳುವುದರ ಜೊತೆಗೆ ವ್ಯಾಖ್ಯಾನವನ್ನು ವಿಶ್ಲೇಷಣೆಯನ್ನು ಮಾಡುತ್ತಾರೆ. ಇಲ್ಲಿನ ನಿರೂಪಣೆಯಲ್ಲಿರುವ ಹಾಸ್ಯ ಸತ್ಯಸಂಗತಿಗಳನ್ನು ಬಯಲಿಗೆಳೆಯುವಂತಹದ್ದು. ಉದಾಹರಣೆಗೆ 'ಮದುವೆ, ಬ್ರಹ್ಮಚರ್ಯೆ ಮತ್ತು ಸೋಲಿಗರು' ಎಂಬ ಅಧ್ಯಾಯ ನೋಡಬಹುದು.

ಜಯದೇವ ಅವರು ವಿಜ್ಞಾನ ಮತ್ತು ಮಾನವಿಕಗಳನ್ನು ಈ ಅಧ್ಯಯನದಲ್ಲಿ ಬೆಸೆದಿದ್ದರೂ ಅವು ಶುಷ್ಕವಾಗಿ ಬೆರೆತಿಲ್ಲ. ಅವು ಮಾನವನ ಅಭಿವೃದ್ಧಿಯ ನೆಲೆಯಲ್ಲಿ ಬೆರೆತಿವೆ. ಸೋಲಿಗರನ್ನು ಮನುಷ್ಯರೆಂದು ಭಾವಿಸಿ, ಅವರ ಕಷ್ಟಸುಖಗಳನ್ನು ವಿಚಾರಿಸುತ್ತಾ, ಅವರಲ್ಲಿ ಒಂದಾಗಿ ಬೆರೆತು ಸಾಂಸ್ಕೃತಿಕ ವಿವರಣೆ ಮಾಡಿದ್ದಾರೆ. ಇದರಿಂದಾಗಿಯೇ ಅದು ಕಥನದ ಸ್ವರೂಪ ಪಡೆದುಕೊಳ್ಳಲು ಸಾಧ್ಯವಾಗಿರುವುದು. ಜೊತೆಗೆ ಮಹತ್ವಪೂರ್ಣ ದಾಖಲೆಯೂ ಆಗಿದೆ. ನಲವತ್ತು ವರ್ಷಗಳ ಕಾಲ ಅವರೊಂದಿಗೆ ಬೆರೆಯುತ್ತಾ, ಒಂದಾಗುತ್ತಾ, ಪ್ರಶ್ನೆಗಳನ್ನು ಕೇಳುತ್ತಾ, ಉತ್ತರಗಳನ್ನು ಕಂಡುಕೊಳ್ಳುತ್ತಾ, ಅವರ ಅನುಭವಗಳೊಂದಿಗೆ ತಮ್ಮ ಅನುಭವಗಳನ್ನು ಒಟ್ಟಿಗೆ ಸೇರಿಸುತ್ತಾ ಅದಕ್ಕೊಂದು ಕಥನರೂಪ ಕೊಡುತ್ತಾರೆ. ಅವರ ಕಲೆ, ಸಾಹಿತ್ಯ, ಸಂಗೀತ, ಆಚರಣೆ, ಹಬ್ಬಗಳು, ಕುಟುಂಬ, ಮದುವೆಗಳು, ನ್ಯಾಯ ವ್ಯವಸ್ಥೆ – ಆರ್ಥಿಕ ಒತ್ತಡಗಳು ಇಲ್ಲಿ ಕಥನರೂಪದಲ್ಲಿ ದಾಖಲಾಗಿವೆ.

ಜಯದೇವ ಅವರು ಗಿರಿಜನರ ದೃಷ್ಟಿಯಿಂದಲೇ ಈ ಕೃತಿಯಲ್ಲಿ ಸೋಲಿಗರನ್ನು ಕಂಡಿದ್ದಾರೆ. ಅವರ ಜೀವನ ಸುಧಾರಿಸುವುದು ಹೇಗೆ ಎಂಬುದನ್ನು ಚಿಂತಿಸಿದ್ದಾರೆ. ಅವರು ಶೋಷಣೆಗೆ ಒಳಗಾಗುತ್ತಿರುವ ಪರಿಯನ್ನು ವಿವರಿಸಿದ್ದಾರೆ. ಅವರ ಕೆಲಸಗಳನ್ನು ಒಪ್ಪಿ ಗೌರವಿಸಬೇಕು. ಅವರ ಬದುಕು ಅವರದೇ ಆದ ಮಾರ್ಗ ಎಂದು ಗುರುತಿಸಬೇಕೆನ್ನುತ್ತಾರೆ. ಆದರೆ, ಅವರು ಆಧುನಿಕತೆಗೆ, ನಾಗರಿಕ ಪ್ರಪಂಚಕ್ಕೆ ಬರಬಾರದೆಂಬ ಅಭಿಪ್ರಾಯ ಅವರಿಗೆ ಖಂಡಿತಾ ಇಲ್ಲ. ಸೋಲಿಗರ ಹಿಂದಿನ ಬದುಕಿನ ಮೇಲೆ ಹೊಸದನ್ನು ಕಟ್ಟುವುದಕ್ಕೆ ನೆರವು, ಪ್ರೋತ್ಸಾಹ ನೀಡಬೇಕು, ಅದು ತನ್ನಷ್ಟಕ್ಕೆ ತಾನೇ ಬೆಳೆಯುವಂತೆ ಮಾಡಬೇಕು. ಅಭಿವೃದ್ಧಿಯ ಜೊತೆಗೆ ಬದಲಾವಣೆ ಆಗುತ್ತಲೇ ಇರಬೇಕು. ಈ ಅಭಿವೃದ್ಧಿ ಮತ್ತು ಬದಲಾವಣೆ ಕಾಲಾಂತರದಲ್ಲಿ ನಾವು ಊಹಿಸಲು ಅಸಾಧ್ಯವಾದ ಸಮೃದ್ಧಿಯನ್ನು ತಂದುಕೊಡುತ್ತದೆ ಎಂದು ಭಾವಿಸಿರುವವರಲ್ಲಿ ಜಯದೇವ ಕೂಡಾ ಒಬ್ಬರು.

ನೆಹರೂ ಅವರು ಆದಿವಾಸಿಗಳಿಗೆ ರಸ್ತೆ, ಶಾಲೆ, ವೈದ್ಯಕೀಯ ವ್ಯವಸ್ಥೆ, ಗೃಹ ಕೈಗಾರಿಕೆಗಳ ಅವಶ್ಯಕತೆಯ ಬಗ್ಗೆ ಹೇಳುತ್ತಿದ್ದರು. ಅದಕ್ಕಾಗಿಯೇ ಅವರು ಪಂಚಶೀಲ ಸೂತ್ರಗಳನ್ನು ರೂಪಿಸಿದ್ದರು. ಜಯದೇವ ಅವರು ಡಾ. ಸುದರ್ಶನ್, ಸೋಮಸುಂದರಂ ಮತ್ತು ಸಂಗಡಿಗರು ನೆಹರೂ ಅವರ ಆದಿವಾಸಿಗಳ ಅಭಿವೃದ್ಧಿ ಮತ್ತು ಬದಲಾವಣೆ ಮಾದರಿಯನ್ನು ಅನುಸರಿಸಿ ದುಡಿಯುತ್ತಿದ್ದಾರೆ. ಕೃಷ್ಣಮೂರ್ತಿ ಹನೂರು ಅವರು ಈ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ, "ಇದು ಕೇವಲ ನೆನಪುಗಳ ರಮ್ಯತೆ, ಭಾವುಕತೆಯ ಬರಹ ಎಂದೆನಿಸುವುದಿಲ್ಲ. ಆ ಕಾರಣಕ್ಕೆ ಕೃತಿ ನೀಡುವ ವಿವರಗಳು ಈಗ ಬರುತ್ತಿರುವ ಸೃಜನಶೀಲ ಇನ್ನಿತರ ವೈಚಾರಿಕ ಇಲ್ಲವೇ ವಿಮರ್ಶೆಯ ಚರ್ಚೆಗಳಿಗಿಂತ ಬೇರೆಯಾದ ಮಾಹಿತಿಯ ಕೃತಿ ಎನಿಸುತ್ತದೆ" ಎಂದು ಹೇಳಿರುವ ಮಾತುಗಳೊಂದಿಗೆ ನಾವೂ ಧ್ವನಿಗೂಡಿಸಬಹುದು.